INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-7, Issue -2, March--April, 2025,
PageNo,70- 81
Peer -Reviewed, Refereed Journal

# ಟಿಪ್ಪು ಸುಲ್ತಾನ್ ಧಾರ್ಮಿಕ ನೀತಿ : ಒಂದು ವಿಶ್ಲೇಷಣೆ

ಡಾ.ಸೈಯದ್ ಬರ್ಕತ್.ಕೆ.ಎ.[1]

ಇತ್ತೀಚಿನ ಸಂಶೋಧನೆಗಳು ಟಿಪ್ಪುವು ಜಾತಿ, ಜನಾಂಗ, ಧರ್ಮ ಅಥವಾ ಪಂಗಡಗಳ ಆಧಾರದ ಮೇಲೆ ಎಂದಿಗೂ ಪಕ್ಷಪಾತ ಮಾಡಲಿಲ್ಲ ಎಂಬುದನ್ನು ತೋರಿಸಿ ಅವನ ವಿದ್ಯಾವಂತ ಸುಸಂಸ್ಕೃತ ವ್ಯಕ್ತಿತ್ವವನ್ನು ಚಿತ್ರಿಸುತ್ತವೆ. ಅನೇಕ ದೇವಾಲಯಗಳಿಗೆ ಉದಾರ ಕೊಡುಗೆ ನೀಡಿದನು, ಅನೇಕ ಹಿಂದೂ ಧಾರ್ಮಿಕ ಸಂಸ್ಥೆಗಳಿಗೆ ಆ ಮೂಲಕ ಆಧಾರವಾಗುವ ಪೋಷಣೆ ಒದಗಿಸಿದನು. ಇಂಥ ಸಂಸ್ಥೆಗಳೇ 156ರಷ್ಟಿದ್ದುವು. ಅಗಾಧ ಬಹುಮತವು ಹಿಂದೂ ಆಗಿರುವ ತನ್ನ ಪ್ರಜಾಕೋಟಿಯ ಬೆಂಬಲವಿಲ್ಲದೆ ಹೋದರೆ ಆಡಳಿತವು ಅಸ್ಥಿರವಾಗುತ್ತದೆ ಎಂಬ ಅರಿವು ಅವನಿಗಿತ್ತು. ಅವನ ನ್ಯಾಯ ಸಂಹಿತೆಯು ಹೀಗೆ ಹೇಳಿತ್ತು: .......ನಮ್ಮ ಪ್ರಜೆಗಳೊಂದಿಗೆ ಜಗಳಾಡುವುದೆಂದರೆ ನಮ್ಮೊಂದಿಗೇ ನಾವು ಯುದ್ಧ ಮಾಡಿದ ಹಾಗೆ. ಅವರು ನಮ್ಮನ್ನು ರಕ್ಷಿಸುವ ಗುರಾಣಿಗಳಿದ್ದ ಹಾಗೆ. ನಮಗೆ ಬೇಕಾದುದೆಲ್ಲವನ್ನೂ ಒದಗಿಸಿ ಶತ್ರುಗಳನ್ನೆದುರಿಸಲು ಅಗತ್ಯವಾದ ಶಕ್ತಿಯನ್ನು ಕಾದಿರಿಸಿಕೊಡುತ್ತಾರೆ.” ಹೈದರನು ಕಾಂಜೀವರಂನಲ್ಲಿ ಒಂದು ದೇವಾಲಯ ವನ್ನು ನಿರ್ಮಿಸಲು ಶಿಲಾನ್ಯಾಸ ಮಾಡಿದ್ದನು, ಆದರೆ ನಿರ್ಮಾಣವು ಪೂರ್ಣಗೊಳ್ಳುವುದ ರೊಳಗಾಗಿ ಅವನು ತೀರಿಕೊಂಡನು. ಟಿಪ್ಪುವು ಅದನ್ನು ಕಟ್ಟಿ ಮುಗಿಸಲು ಆದೇಶ ನೀಡಿದ್ದಲ್ಲದೆ ಅದರ ಉದ್ಘಾಟನೆಯಲ್ಲೂ ಭಾಗವಹಿಸಿದನು. ಅವನು ಅನೇಕ ಹಿಂದೂಗಳನ್ನು ರಾಜ್ಯದ ಉನ್ನತ ಹುದ್ದೆಗಳಿಗೆ ಏರಿಸಿದನು. ಪೂರ್ಣಯ್ಯ ದಿವಾನ ರಾಗಿದ್ದುದಲ್ಲದೆ ಕಂದಾಯ ಮತ್ತು ಹಣಕಾಸು ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು; ಕೃಷ್ಣರಾವ್ ಕೋಶಾಧಿಕಾರಿಯಾಗಿದ್ದರು; ಶಾಮ ಅಯ್ಯಂಗಾರ್ ಅಂಚೆ ಸಚಿವರು ಹಾಗೂ ಪೊಲೀಸ್ ಅವರ ಹೊಣೆಯಾಗಿತ್ತು. ನರಸಿಂಗರಾವ್ ಮತ್ತು ರಂಗ ಅಯ್ಯಂಗಾರ್ ಶ್ರೀರಂಗಪಟ್ಟಣದಲ್ಲಿ ಮುಖ್ಯವಾದ ಹುದ್ದೆಗಳಲ್ಲಿದ್ದರು. ಶ್ರೀನಿವಾಸರಾವ್ ಮತ್ತು ಅಪ್ಪಾಜಿರಾಮ್ ಇಬ್ಬರೂ ಪ್ರಸಿದ್ಧ ಮುತ್ಸದ್ದಿಗಳು, ಮೂಲಚಂದ ಮತ್ತು ಸಜ್ಜನರಾವ್ ಮೊಗಲ್

[1].ಸಹಾಯಕ ಪ್ರಾಧ್ಯಾಪಕರು,ಇತಿಹಾಸ ವಿಭಾಗ,ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಳೆಯಂಗಡಿ.

ದರ್ಬಾರಿನಲ್ಲಿ ಅವನ ಪ್ರತಿನಿಧಿಗಳಾಗಿದ್ದರು. ನಾಗಪ್ಪ ಕೊಡಗಿನ ಫೌಜುದಾರರಾಗಿದ್ದರು. ಟಿಪ್ಪುವಿನ ಸಿವಿಲ್ ಅಧಿಕಾರಿಗಳ ಪಟ್ಟಿಯಲ್ಲೂ ಅಷ್ಟೆ, ಬೇಕಾದಷ್ಟು ಹಿಂದೂ ಹೆಸರುಗಳಿದ್ದುವು. ಸೈನ್ಯದಲ್ಲೂ ಅವರು ಮುಖ್ಯವಾದ ಹುದ್ದೆಗಳಲ್ಲಿದ್ದರು. ಹರಿಸಿಂಗ್ ಒಂದು ಅಶ್ವದಳದ ಮುಖ್ಯಸ್ಥನಾಗಿದ್ದರೆ, ನಾಯರರನ್ನು ಅಡಗಿಸಲು ಶ್ರೀಪತರಾವ್‌ನನ್ನು ಕಳುಹಿಸಲಾಯಿತು. ಶಿವಾಜಿ ಎಂಬ ಮರಾಠ ಸರದಾರನು 3000 ಅಶ್ವದಳದ ಮುಖ್ಯಸ್ಥನಾಗಿದ್ದು ಬೆಂಗಳೂರು ಕೋಟೆಯನ್ನು ಕಾರನ್‌ವಾಲಿಸನಿಗೆದುರಾಗಿ ರಕ್ಷಿಸುವ ಗುರುತರ ಹೊಣೆಗಾರಿಕೆಯನ್ನು ನಿರ್ವಹಿಸುತ್ತಿದ್ದನು. ಮಹಾತ್ಮಾಗಾಂಧೀಜಿಯವರು 'ಯಂಗ್ ಇಂಡಿಯಾ'ದಲ್ಲಿ ಬರೆಯುತ್ತಾ ಟಿಪ್ಪುವು ಹಿಂದೂ–ಮುಸ್ಲಿಂ ಐಕ್ಯತೆಯ ಮೂರ್ತರೂಪ ಎಂದು ವರ್ಣಿಸಿದ್ದು ಸಮುಚಿತವೇ ಆಗಿದೆ.

ಟಿಪ್ಪುವು ಶೃಂಗೇರಿಯ ಸ್ವಾಮಿಗಳಿಗೆ ಬರೆದ ಪತ್ರಗಳನ್ನು 1916ರಲ್ಲಿ ಆರ್. ನರಸಿಂಹಾಚಾರ್ಯರು ಪತ್ತೆಮಾಡಿದರು. ಅವುಗಳಲ್ಲಿ ಹಿಂದೂ ಧರ್ಮದ ಬಗ್ಗೆ ಟಿಪ್ಪುವಿಗಿದ್ದ ಅಪಾರ ಗೌರವದ ಭಾವನೆಗಳು ವ್ಯಕ್ತವಾಗಿವೆ. ಒಂದು ಪತ್ರದಲ್ಲಿ ಅವನು ಸಂಸ್ಕೃತ ಶ್ಲೋಕವೊಂದನ್ನು ಉದ್ಧರಿಸುತ್ತಾನೆ. "ಜನರು ದುಷ್ಕಾರ್ಯಗಳನ್ನು ನಗುನಗುತ್ತಾ ಮಾಡುತ್ತಾರೆ, ಆದರೆ ಅದರ ಫಲಗಳನ್ನು ಅಳುತ್ತಾ ಅವರು ಅನುಭವಿಸಬೇಕಾಗುತ್ತದೆ" ಎಂದು ಅದರ ಅರ್ಥ. ಇನ್ನೊಂದು ಪತ್ರದಲ್ಲಿ ಸರ್ವರ ಒಳಿತಿಗಾಗಿ ಪ್ರಾರ್ಥನೆ ಮಾಡಬೇಕು ಎಂದು ಸ್ವಾಮೀಜಿ ಅವರನ್ನು ಕೋರಿದ್ದಾನೆ. ಇನ್ನು ಸ್ವಾರಸ್ಯವಾದ ವಿಷಯವೆಂದರೆ, ಮರಾಠರ ಪರಶುರಾಮ ಭಾವು ಧಾಳಿಮಾಡಿ ಶೃಂಗೇರಿಯ ದೇವಾಲಯಕ್ಕೆ ಹಾನಿಯನ್ನುಂಟುಮಾಡಿದಾಗ, ಟೀಪುವು ಶಾರದಾ ದೇವಾಲಯದ ಬೇರೊಂದು ಮೂರ್ತಿಯನ್ನು ಪ್ರತಿಷ್ಠಾಪಿಸಲು ಸಾಕಷ್ಟು ಧನಸಹಾಯ ಮಾಡಿದನು. ಆಗ ಅವನು ಶೃಂಗೇರಿಯ ಸ್ವಾಮಿಗಳಿಗೆ ಬರೆದ ಪತ್ರಗಳು ಹಿಂದೂ ಧರ್ಮದ ಬಗೆಗೆ ಅವನಿಗಿದ್ದ ಅಪಾರ ಗೌರವವನ್ನು ಸೂಚಿಸುವುದಲ್ಲದೆ, ಅವನ ವಿರುದ್ಧವಾಗಿ ಹೇಳುವ ಮತೀಯ ಅಸಹಿಷ್ಣುತೆಯ ಆಪಾದನೆಗಳನ್ನು ಅಲ್ಲಗಳೆಯು ಇವೆ. ವಿಗ್ರಹದ ಪ್ರತಿಷ್ಠಾಪನೆಯಾದ ಮೇಲೆ ಪ್ರಸಾದವನ್ನೂ ಶಾಲನ್ನೂ ಟೀಪುವಿಗೆ ಸ್ವಾಮೀಜಿ ಕಳುಹಿಸಿಕೊಟ್ಟರು. ಬಹು ಭಕ್ತಿಯಿಂದ ಅವುಗಳನ್ನು ಸ್ವೀಕರಿಸಿದ ಟಿಪ್ಪುವು ಶಾರದಾ ದೇವಿಗೆಂದು ಒಂದು ಚಿನ್ನದ ಜರಿಯ ಸೀರೆಯನ್ನೂ ಮೇಲು ವಸ್ತ್ರವನ್ನೂ, ಸ್ವಾಮಿಗಳಿಗೆ ಒಂದು ಜೋಡಿ ಶಾಲುಗಳನ್ನು ಭಕ್ತಿಪೂರ್ವಕವಾಗಿ ಕಳುಹಿಸಿಕೊಟ್ಟನು. ಇನ್ನೊಂದು ದಾಖಲೆಯಲ್ಲಿ ದೇವಿಗೊಂದು, ಸ್ವಾಮಿಗಳಿಗೊಂದು ಹೀಗೆ ಎರಡು ಪಲ್ಲಕ್ಕಿಗಳನ್ನು ಕಳುಹಿಸಿಕೊಟ್ಟನೆಂದೂ ಹೇಳಿದೆ.

ಟಿಪ್ಪುವು ಪೋಷಣೆ ಕೊಟ್ಟ ಸ್ಥಳ ಶೃಂಗೇರಿ ಒಂದೇ ಅಲ್ಲ, ನಂಜನಗೂಡು ಬಳಿಯ ಕಳಲೆಯ ಲಕ್ಷ್ಮೀಕಾಂತ ದೇವಸ್ಥಾನಕ್ಕೆ ನಾಲ್ಕು ಬೆಳ್ಳಿಯ ಬಟ್ಟಲುಗಳನ್ನು, ಒಂದು ಬೆಳ್ಳಿ ತಟ್ಟೆಯನ್ನೂ ಒಂದು ಬೆಳ್ಳಿಯ

ಬೋಗುಣಿಯನ್ನು ಅರ್ಪಿಸಿದನು; ಮೇಲುಕೋಟೆಯ ನಾರಾಯಣಸ್ವಾಮಿ ದೇವಾಲಯಕ್ಕೆ ಚಿನ್ನ ಬೆಳ್ಳಿ ಪಾತ್ರೆಗಳನ್ನೂ ಆನೆಗಳನ್ನೂ ಜವಾಹಿರಿಯನ್ನು ಅರ್ಪಿಸಿದನು; ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯಕ್ಕೆ ರತ್ನ ಖಚಿತವಾದ ಬಟ್ಟಲನ್ನು, ಅಮೂಲ್ಯ ಹರಳುಗಳನ್ನೂ ಕಾಣಿಕೆಕೊಟ್ಟನು, ಜೊತೆಗೆ ಒಂದು ಅಪೂರ್ವವಾದ ಪಚ್ಚೆಯ ಲಿಂಗವನ್ನು ಕೊಟ್ಟನು. ರಂಗನಾಥ ದೇವಾಲಯವು ಟೀಪುವಿನ ಅರಮನೆಯಿಂದ ಕೇವಲ ಒಂದು ಕಲ್ಲೆಸೆತದ ದೂರದಲ್ಲಿತ್ತು. ಅಲ್ಲಿ ಅವನು ಮುಯೆಜಿನನ ಪ್ರಾರ್ಥನಾ ಕರೆಯನ್ನೂ ದೇವಾಲಯದ ಗಂಟೆಗಳ ನಾದವನ್ನೂ ಸಮಾನ ಗೌರವದಿಂದ ಆಲಿಸುತ್ತಿದ್ದನು. ಅವನ ಸಮೀಪದಲ್ಲಿ ನರಸಿಂಹ ಮತ್ತು ಗಂಗಾಧರೇಶ್ವರ ದೇವಾಲಯಗಳೂ ಇದ್ದುವು. ಉನ್ನತ ಅಧಿಕಾರಗಳಿಗೆ ಬೇಕಾದಷ್ಟು ಜನ ಹಿಂದೂಗಳನ್ನು ನೇಮಿಸಿದ್ದು, ಹಿಂದೂ ದೇವಾಲಯಗಳಿಗೆ ಬೇಕಾದಷ್ಟು ದತ್ತಿಗಳನ್ನೂ ಕಾಣಿಕೆಗಳನ್ನೂ ಅರ್ಪಿಸಿದ್ದು ಅವನು ಮತಾಂಧನೂ ಅಸಹಿಷ್ಣುವೂ ಆಗಿದ್ದನೆಂಬ ಆಪಾದನೆಯನ್ನು ಸುಳ್ಳಾಗಿಸುತ್ತದೆ. ಮೇಲುಕೋಟೆಯ ದೇವಸ್ಥಾನದಲ್ಲಿ ತೆಂಗಲೈ (ದಾಕ್ಷಿಣಾತ್ಯ) ಪದ್ಧತಿಯಲ್ಲಿ ಪೂಜಾವಿಧಿಗಳು ನಡೆಯಬೇಕೋ ವಡದ ಪದ್ಧತಿಯಲ್ಲಿ ನಡೆಯಬೇಕೋ ಎಂಬ ವಿಷಯದಲ್ಲಿ ಶ್ರೀವೈಷ್ಣವರ ಎರಡು ಉಪಪಂಗಡಗಳ ನಡುವೆ ಕಲಹವುಂಟಾಗಿ ಟೀಪುವಿನ ಬಳಿಗೆ ಬಂದಾಗ ಅವನು ವಿಚಾರ ಮಾಡಿ ನೀಡಿದ ತೀರ್ಪು ಎರಡೂ ಪಕ್ಷಗಳವರು ಗೊಣಗಾಟವಿಲ್ಲದೆ ಒಪ್ಪಿಕೊಳ್ಳುವಂತೆ ಮಾಡಿತು. ಶೃಂಗೇರಿ ಮತ್ತು ಮೇಲುಕೋಟೆಗಳ ವಿಷಯದಲ್ಲಿ ಟಿಪ್ಪುವಿನ ನೀತಿಯು ಅವನ ಆಡಳಿತವು ಯಾವುದೇ ಪೂರ್ವಾಗ್ರಹವಿಲ್ಲದೆ ಜಾತ್ಯತೀತವಾಗಿ ನಡೆಯುತ್ತಿದ್ದಿತು ಎಂಬುದನ್ನು ಸೂಚಿಸುತ್ತದೆ. ಟಿಪ್ಪುವಿಗೆ ಎಷ್ಟು ತೀವ್ರವಾದ ಆಸಕ್ತಿಯಿದ್ದಿತು ಎಂಬುದನ್ನು ಇದು ತೋರಿಸುತ್ತದೆ.ಇಷ್ಟೆಲ್ಲ ಸಾಲದಿದ್ದರೂ, ಟೀಪುವು ಹಿಂದೂ ಜ್ಯೋತಿಷಿಗಳ ಸಲಹೆ ಕೇಳುತ್ತಿದ್ದನು. ಬ್ರಾಹ್ಮಣರಿಗೆ ಭೋಜನ ಮಾಡಿಸುತ್ತಿದ್ದನು. ಧಾರ್ಮಿಕ ಸಮಾರಂಭಗಳ ವೆಚ್ಚಗಳನ್ನು ವಹಿಸಿಕೊಳ್ಳುತ್ತಿದ್ದನು, ಹಿಂದೂ ಧಾರ್ಮಿಕ ಸಂಸ್ಥೆಗಳಿಗೆ ಉದಾರ ನೆರವು ನೀಡುತ್ತಿದ್ದನು ಎನ್ನುವುದಕ್ಕೆ ದಾಖಲೆಗಳಿವೆ. ಅವನು ತನ್ನ ಪ್ರಜೆಗಳೆಲ್ಲರನ್ನೂ ಸಮಾನತೆ, ಸಮಾನ ನ್ಯಾಯದಿಂದ ನೋಡುತ್ತಿದ್ದನು. ಇಂಗ್ಲಿಷರೊಂದಿಗೆ ಕೂಡಿಕೊಂಡು ತನ್ನ ವಿರುದ್ಧ ಮಸಲತ್ತು ಮಾಡಿದ ನಾಯಕರು, ಕೊಡಗಿನವರು ಮತ್ತು ಕ್ರಿಶ್ಚಿಯನರ ಬಗೆಗೆ ಅವನು ಕಠೋರವಾಗಿ ವರ್ತಿಸಿದನು; ತನ್ನ ಮತೀಯರಾದವರೇ ಆ ದ್ರೋಹದ ಕೆಲಸಮಾಡಿದ್ದರೆ ಅವರನ್ನೂ ಟೀಪು ಖಂಡಿತವಾಗಿ ಸುಮ್ಮನೆ ಬಿಡುತ್ತಿರಲಿಲ್ಲ. ಮಾಪಿಳ್ಳೆಗಳು, ಮೆಹದೆವಿಗಳು, ಕರ್ನೂಲಿನ ಸುಂದಾ ಮತ್ತು ಸವಣೂರುಗಳ ನವಾಬರು ಇವರಿಗೂ ಅದೇ ಶಿಕ್ಷೆಯಾಯಿತು, ಟೀಪುವು ಮರಾಠರಿಗಿಂತ ಹೆಚ್ಚಾಗಿ ನಿಜಾಮನ ಕಡೆಗೆ ದ್ವೇಷ ಕಾರುತ್ತಿದ್ದನು.

ಟಿಪ್ಪುವಿನ ಧಾರ್ಮಿಕ ನೀತಿಯನ್ನು ಕೇವಲ ಮಲಬಾರಿನ ನಾಯಕರುಗಳು ಕೊಡಗಿನ ರಾಜರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಕ್ರೈಸ್ತರು ಇವರ ಹೇಳಿಕೆಗಳ ಅಧಾರದಿಂದ ಮತ್ತು ಟಿಪ್ಪುವಿನ ಯುದ್ಧ

ಕೈದಿಗಳು ಸೆರೆಮನೆಯಲ್ಲಿ ನೀಡಿದ ಹೇಳಿಕೆಗಳ ಆಧಾರದಿಂದ ಮತ್ತು ಆ ಧೋರಣೆಯಿಂದ ಮಾತ್ರ ಟೀಕಿಸಲಾಗುತ್ತಿದೆ. ಕೊಡಗಿನಲ್ಲಿ ಕೊಡವ ಮಾಪಿಳ್ಳೆಗಳು ಎನ್ನುವ ಒಂದು ವರ್ಗವಿದೆ. ಇವರು ಟಿಪ್ಪು ಸುಲ್ತಾನನಿಂದ ಮತಾಂತರಕ್ಕೆ ಒಳಗಾದವರು ಎಂದು ಪ್ರಚಾರ ಮಾಡಲಾಗಿದೆ. ಆದರೆ ಈಗ ಕೊಡಗಿನಲ್ಲಿರುವ ಮುಸಲ್ಮಾನರು ಟಿಪ್ಪು ವಿರುದ್ಧ ಯಾವುದೇ ಆಕ್ಷೇಪ ಮಾಡುತ್ತಿಲ್ಲ ಎಂಬುದು ಮುಖ್ಯವಾದ ವಿಷಯವಾಗಿದೆ.

ಶೃಂಗೇರಿ ಹಳ್ಳಿಯು ತುಂಗಾ ನದಿಯ ಎಡದಂಡೆಯ ಮೇಲೆ ಒಂದು ಬೆಟ್ಟದ ಕೆಳಗಿದೆ. ಎಂಟನೆಯ ಶತಮಾನದ ಶಂಕರಾಚಾರ್ಯರು ಸ್ಥಾಪಿಸಿದ ನಾಲ್ಕು ಮಠಗಳಲ್ಲಿ ಮುಖ್ಯವಾದುದಿದು, ಭಾರತದಲ್ಲಿನ ಎಲ್ಲ ಹಿಂದೂಗಳು ಈ ಮಠದ ಸ್ವಾಮಿಗಳನ್ನು ಬಹಳ ಭಕ್ತಿಯಿಂದ ಕಾಣುತ್ತಾರೆ.

1791ರಲ್ಲಿ ರಘುನಾಥರಾವ್ ಪಟ್ಟವರ್ಧನನ ನಾಯಕತ್ವದಲ್ಲಿ ಮರಾಠ ಅಶ್ವಪಡೆಯವರು ಶೃಂಗೇರಿಯ ಮೇಲೆ ದಾಳಿಮಾಡಿ, ಅಲ್ಲಿನ ಬ್ರಾಹ್ಮಣರನ್ನೂ ಸೇರಿದಂತೆ ಅನೇಕ ಜನರನ್ನು ಕೊಂದು, ಗಾಯಗೊಳಿಸಿ, ಮಠದ ಅಮೂಲ್ಯವಾದ ಆಭರಣೇತ್ಯಾದಿಗಳನ್ನು ಕೊಳ್ಳೆಹೊಡೆದು, ಅಲ್ಲಿನ ಪವಿತ್ರವಾದ ಶಾರದಾದೇವಿಯ ವಿಗ್ರಹವನ್ನು ಸ್ಥಳಾಂತರಿಸಿಬಿಡುವ ಘೋರಾಪರಾಧವನ್ನು ಮಾಡಿದರು. ಇದರಿಂದಾಗಿ ಸ್ವಾಮಿಗಳು ಆ ಸ್ಥಳವನ್ನು ಬಿಡುವುದನಿವಾರ್ಯವಾಗಿ, ಕಾರ್ಕಳದಲ್ಲಿ ವಾಸಿಸಲಾರಂಭಿಸಿದರು. ಅವರು ಮರಾಠರ ದಾಳಿಯನ್ನು ಟಿಪ್ಪುವಿಗೆ ತಿಳಿಸಿ, ದೇವಿಯ ವಿಗ್ರಹವನ್ನು ಮತ್ತೆ ಪ್ರತಿಷ್ಠಾಪಿಸುವ ಇಚ್ಛೆಯನ್ನು ವ್ಯಕ್ತಪಡಿಸಿದರು. ಟಿಪ್ಪು ಅದನ್ನೊಂದು ಅವಮಾನವೆಂದು ಬಗೆದುದಲ್ಲದೆ, ಸುದ್ದಿಯನ್ನು ಕೇಳಿ ತುಂಬ ನೊಂದು, "ಅಂತಹ ಪವಿತ್ರಸ್ಥಳದ ಮೇಲೆ ದಾಳಿಮಾಡಿ ಪಾಪಾರ್ಜನೆ ಮಾಡಿದವರು ತಮ್ಮ ದುಷ್ಕೃತ್ಯಗಳ ಪರಿಣಾಮಗಳನ್ನು ಈ ಕಲಿಯುಗದಲ್ಲಿ 'ಹಸದ್ಭಿ ಕ್ರಿಯತೇ ಕರ್ಮ ರುದದ್ಭೀರ್ ಅನುಭೂದುತೆ" (ಹಸನ್ಮುಖರಾಗಿ ದುಷ್ಕೃತ್ಯಗಳನ್ನು ಮಾಡಿದವರು ಫಲವನ್ನು ರೋದಿಸುತ್ತ ಅನುಭವಿಸುವರು) ಎಂಬ ಶ್ಲೋಕದ ಪ್ರಕಾರವಾಗಿ ಬೇಗನೆಯೇ ಅನುಭವಿಸುವರು ಎಂದು ಬರೆದನು. ಗುರುಗಳಿಗೆ ತೋರಿಸುವ ರಕ್ಕಸತನ, ಸಭ್ಯತೆಯನ್ನು ಹಾಳು ಮಾಡಿದಂತಾಗುತ್ತದೆ. ಸ್ವಾಮಿಗಳಿಗೆ ತಕ್ಷಣವೇ 200 ರಹತಿಗಳನ್ನು (ಫನಾಂಗಳು) ನಗದಾಗಿ ಸಲ್ಲಿಸಬೇಕೆಂದೂ, ಬೇಕಾಗಿದ್ದರೆ ಮತ್ತೆ 200 ರಹತಿಗಳ ಬೆಲೆಯ ಧಾನ್ಯ ಮತ್ತಿತರ ವಸ್ತುಗಳನ್ನು ಶಾರದಾದೇವಿಯ ಸಂಪ್ರೋಕ್ಷಣೆಗೆ ಕೊಡಬೇಕೆಂದೂ ಟಿಪ್ಪೂ ಬಿದನೂರಿನ ಆಸಫನಿಗೆ ಅಪ್ಪಣೆ ಮಾಡಿದನು. ಅನಂತರ ಅವರು ಸ್ವಾಮಿಗಳಿಗೆ ಬರೆದು ವಿಗ್ರಹದ ಪುನರ್‌ಪ್ರತಿಷ್ಠಾಪನೆಯ ಮತ್ತು ಬ್ರಾಹ್ಮಣ ಸಮಾರಾಧನೆಯ ಆದನಂತರ "ನಮ್ಮ ಅಭ್ಯುದಯಕ್ಕಾಗಿಯೂ ಹಾಗೂ ನಮ್ಮ ಶತ್ರುಗಳ ವಿನಾಶಕ್ಕಾಗಿಯೇ ಪ್ರಾರ್ಥಿಸಬೇಕೆಂದು ಮನವಿ ಮಾಡಿದನು. ವಿಗ್ರಹ ಪ್ರತಿಷ್ಠಾಪನೆಯಾದ ಮೇಲೆ, ಅವನಿಗೆ ಪ್ರಸಾದವೂ ಮತ್ತು ಶಾಲುಗಳೂ ಬಂದ ನಂತರ, ಅವನು ಪ್ರತಿಯಾಗಿ ದೇವಿಗೆ ಸೀರೆ ಮತ್ತು ರವಿಕೆಗಳನ್ನೂ ಹಾಗೂ ಸ್ವಾಮಿಗಳಿಗೆ ಶಾಲುಗಳನ್ನೂ ಕಳಿಸಿಕೊಟ್ಟನು.

ಇನ್ನೊಂದು ಕಾಗದದಲ್ಲಿ ಟಿಪ್ಪು ಸಹಸ್ರಚಂಡಿ ಜಪ ಮತ್ತು ಸಹಸ್ರಚಂಡಿ ಜಪದ ಸಮಾರಂಭಗಳನ್ನು ಆಚರಿಸುವ ವೆಚ್ಚಗಳ ವಿವರಗಳು ಬಂದಿತೆಂದು ತಿಳಿಸುತ್ತ, ದೇಶದ ಕ್ಷೇಮಕ್ಕಾಗಿಯೂ ಮತ್ತು ಅದರ ಶತ್ರುಗಳ ವಿನಾಶಕ್ಕಾಗಿಯೂ ಮಾಡುವ ಹೋಮದ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿ, ಹೋಮಕ್ಕೆ ಬೇಕಾಗುವ ಎಲ್ಲ ವಸ್ತುಗಳನ್ನು ಶೃಂಗೇರಿಗೆ ಹೋಗಿ ಒದಗಿಸುವಂತೆ ತನ್ನ ಅಧಿಕಾರಿಗಳಿಗೆ ಅಪ್ಪಣೆ ಮಾಡಿರುವುದಾಗಿ ತಿಳಿಸಿ, ಈ ಜಪಗಳನ್ನು ಮಾಡಬೇಕೆಂದೂ, ಇದರಲ್ಲಿ ನಿರತರಾದ ಬ್ರಾಹ್ಮಣರಿಗೆ ಹಣದ ಸಂಭಾವನೆಗಳನ್ನು ಕೊಡುವುದಲ್ಲದೆ ಪ್ರತಿನಿತ್ಯ ಒಂದು ಸಾವಿರ ಬ್ರಾಹ್ಮಣರಿಗೆ ಸಂತರ್ಪಣೆ ಯನ್ನೇರ್ಪಡಿಸಬೇಕೆಂದೂ ಕೋರಿದನು. ಅದೇ ವರುಷದ ಮುಂದಿನ ಕಾಗದದಲ್ಲಿ ಸಹಸ್ರಚಂಡಿ ಜಪಾರಂಭವಾದುದನ್ನು ಕೇಳಿ ಸಂತೋಷಿಸಿದುದಾಗಿ ಹೇಳಿದ್ದಾನೆ. ಈ ಕಾಲದ ಮತ್ತೆರಡು ದಾಖಲೆಗಳಿವೆ. ಬಿದನೂರಿನ ಆಸಫನು ದೇವಿಯ ಉಪಯೋಗಕ್ಕೊಂದು ಪಲ್ಲಕ್ಕಿಯನ್ನೊದಗಿಸಬೇಕೆಂದು ಇವನು ಆಣತಿಯನ್ನು ಕೊಟ್ಟುದಾಗಿ ತಿಳಿಯುತ್ತದೆ. ಮತ್ತೊಂದರಲ್ಲಿ ಸ್ವಾಮಿಗಳ ಉಪಯೋಗಕ್ಕೆ ಸುಂದರವಾದ ಪಲ್ಲಕ್ಕಿಯನ್ನು ಕಳುಹಿಸಿಕೊಟ್ಟಿರುವುದಾಗಿ ತಿಳಿಸಿದೆ. 1792ನೆಯ ವರುಷದ ಮತ್ತೊಂದು ಕಾಗದದಲ್ಲಿ ಸ್ವಾಮಿಗಳ ಉಪಯೋಗಕ್ಕಾಗಿ ಬೆಳ್ಳಿಯ ಹಿಡಿಗಳನ್ನು ಹಾಕಿಸಿದ ಒಂದು ಜತೆ ಚೌರಿಗಳನ್ನು ಟಿಪ್ಪು ಕಳುಹಿಸಿರುವುದಾಗಿ ತಿಳಿಸಿದ್ದಾನೆ.

ಈ ಪತ್ರಗಳೆಲ್ಲವೂ "ಗೌರವಪೂರ್ಣವಾದ ಭಾಷೆಯಿಂದೊಡಗೂಡಿ, ಮಹಿಮಾವಂತರಲ್ಲಿರಬೇಕಾದ ಭಕ್ತಿಯಿಂದ ತುಂಬಿದೆ". ಟಿಪ್ಪು ಪರಮತ ದ್ವೇಷಿಯೆಂದೂ ಮತ್ತು ತನ್ನ ಹಿಂದೂ ಪ್ರಜೆಗಳಿಗೆ ಚಿತ್ರಹಿಂಸೆಯನ್ನು ಕೊಟ್ಟನೆಂದೂ ಹೇಳುವ ಅವಿವೇಕವನ್ನು ಸ್ಪಷ್ಟವಾಗಿ ಬಯಲಿಗಿಕ್ಕುತ್ತವೆ. ಅವನೇನಾದರೂ ಅತಿರೇಕದವನಾಗಿದ್ದರೆ, ಒಬ್ಬ ಹಿಂದೂ ಆಚಾರ್ಯನನ್ನು "ಜಗದ್ಗುರು"ವೆಂದು ಸಂಬೋಧಿಸುತ್ತಿರಲಿಲ್ಲ. ಅಥವಾ ಒಂದು ವಿಗ್ರಹದ ಪುನರ್‌ಪ್ರತಿಷ್ಠಾಪನೆಗೆ ಮತ್ತು ಹಿಂದೂ ಧಾರ್ಮಿಕ ಸಮಾರಂಭವನ್ನಾಚರಿಸು ಇದಕ್ಕೆ ಬೇಕಾಗುವ ಹಣ ಮತ್ತು ವಸ್ತುಗಳನ್ನೊದಗಿಸುತ್ತಿರಲಿಲ್ಲ.

ಸುತ್ತ ಶತ್ರುಗಳು ತುಂಬಿಕೊಂಡಿರುವಾಗ, ತನ್ನ ಹೊಂದೂ ಪ್ರಜೆಗಳ ಸಂಪೂರ್ಣವಾದ ಬೆಂಬಲವನ್ನು ಪಡೆಯಲೆಂದು ಸಮಾಧಾನಕ್ಕಾಗಿ ಸ್ವಾಮಿಗಳಿಗೆ ಈ ಔದಾರ್ಯವನ್ನು ತೋರಿದನೆಂದೂ ವಾದಿಸಬಹುದು. ಆದರೆ, ದೇವಸ್ಥಾನದಲ್ಲಿನ ಅವನ ಸುತ್ತೆಲ್ಲ ಶತ್ರುಗಳು ತುಂಬಿಕೊಂಡಿರುವಾಗ, ತನ್ನ ಹಿಂದೂ ಪ್ರಜೆಗಳ ಅವನ ಆಸಕ್ತಿ ಮತ್ತು ಸ್ವಾಮಿಗಳಲ್ಲಿನ ಅವನ ಭಕ್ತಿಗಳು ಯುದ್ಧಕಾಲಕ್ಕೆ ಮಾತ್ರ ಸೀಮಿತಗೊಂಡಿರದೆ, ಶ್ರೀರಂಗಪಟ್ಟಣದ ಪತನದವರೆಗೂ ಅದು ಮುಂದುವರಿಯಿತೆಂಬುದನ್ನು ನಾವು ನೆನಪಿನಲ್ಲಿಟ್ಟಿರತಕ್ಕುದು. ಸ್ವಾಮಿಗಳ ಆರೋಗ್ಯವನ್ನು ವಿಚಾರಿಸುತ್ತ ಬರೆಯುವುದನ್ನು ಮುಂದುವರಿಸಿ, ಆಗಾಗ್ಗೆ ಅವರಿಗೆ ಶಾಲುಗಳನ್ನೂ ಮತ್ತು ದೇವಿಗೆ ಅಮೂಲ್ಯ ಕಾದ ವಸ್ತ್ರಗಳನ್ನೂ ಕಳುಹಿಸುತ್ತಿದ್ದನು. ಸುಲ್ತಾನನು ತನ್ನ ಶತ್ರುಗಳೊಡನೆ ಶಾಂತಿಯಿಂದಿರುವಾಗ 1793ರಲ್ಲಿ ಯಾತ್ರೆಯಲ್ಲಿದ್ದ ಸ್ವಾಮಿಗಳ ಕಾಗದವು

ಬಂದುದನ್ನೊಪ್ಪಿ ಕೊಳ್ಳುತ್ತ "ನೀವು ಜಗದ್ಗುರುಗಳು. ಇಡೀ ಜಗತ್ತಿನ ಅಭ್ಯುದಯಕ್ಕೆ ಮತ್ತು ಅದರ ಜನತೆಯ ಸುಖಕ್ಕಾಗಿ ಯಾವಾಗಲೂ ತಪಸ್ಸನ್ನಾಚರಿಸುವವರು ನೀವು. ದಯವಿಟ್ಟು ನಿಮ್ಮ ಪ್ರಗತಿಗಾಗಿ ಭಗವಂತನಲ್ಲಿ ಪ್ರಾರ್ಥಿಸಿರಿ. ನಿಮ್ಮಂತಹ ಪವಿತ್ರಾತ್ಮರು ಯಾವ ದೇಶದಲ್ಲಿರುವರೋ, ಅಲ್ಲಿ ಒಳ್ಳೆಯ ಮಳೆಬೆಳೆಗಳಾಗಿ, ಅದು ಪುರೋಭಿವೃದ್ಧಿಯನ್ನು ಹೊಂದುತ್ತದೆ" ಎಂದು ಒಂದು ಕಾಗದದಲ್ಲಿ ಬರೆದನು. ಟಿಪೂವೊಬ್ಬನು ಅತಿರೇಕದ ಮುಸ್ಲಿಮನಾಗಿದ್ದರೆ, ಅಂತಹ ಭಾಷೆಯಲ್ಲಿ ಹಿಂದೂ ಗುರುವೊಬ್ಬನಿಗೆ ಬರೆಯುತ್ತಿರಲಿಲ್ಲ ಅಥವಾ ತನ್ನ ಮತಕ್ಕೆ ವಿರೋಧವೆನ್ನಿಸಿದ ಪೂಜೆಯ ರೀತಿಯನ್ನು ನಂಬಿ, ಅವಕ್ಕೆ ಉತ್ತೇಜನವನ್ನೀಯುತ್ತಿರಲಿಲ್ಲ.

ಅದರ ಮೇಲೆ, ಟಿಪ್ಪುವು ತನ್ನ ಆಶ್ರಯವನ್ನು ಕೇವಲ ಶೃಂಗೇರಿಯ ಮಠಕ್ಕೆ ಮಾತ್ರ ಸೀಮಿತಗೊಳಿಸಿರಲಿಲ್ಲ. ಅದೇ ರೀತಿಯಾಗಿ ತನ್ನ ರಾಜ್ಯದ ಇತರ ದೇವಸ್ಥಾನ ಗಳಿಗೂ ಅದನ್ನು ವಿಸ್ತರಿಸಿದ್ದನು. ನಂಜನಗೂಡು ತಾಲ್ಲೂಕಿನ ಕಳಲೆಗ್ರಾಮದ ಲಕ್ಷ್ಮೀಕಾಂತ ದೇವಸ್ಥಾನದಲ್ಲಿರುವ ನಾಲ್ಕು ಬೆಳ್ಳಿಯ ಬಟ್ಟಲುಗಳು, ಒಂದು ಬೆಳ್ಳಿಯ ತಟ್ಟೆ ಮತ್ತು ಒಂದು ಬೆಳ್ಳಿಯ ಉಗುಳುದಾನಿಯ ಮೇಲಿರುವ ಬರೆಹಗಳು, ಪಾತ್ರೆಗಳನ್ನು ಟಿಪ್ಪು ಅರ್ಪಿಸಿರುವುದಾಗಿ ಹೇಳುತ್ತದೆ. ಅದೇ ರೀತಿಯಾಗಿ ಮೇಲುಕೋಟೆ ನಾರಾಯಣ ಸ್ವಾಮಿ ದೇವಸ್ಥಾನವು ಹೊಂದಿರುವ ಕೆಲವು ಆಭರಣಗಳು ಮತ್ತು 'ಬಂಗಾರ ಮತ್ತು ಬೆಳ್ಳಿಯ ಪಾತ್ರೆಗಳ ಮೇಲಿನ ಶಾಸನಗಳು, ಅವು ಟಿಪ್ಪುವಿನ ಅರ್ಪಣೆಗಳೆಂದು ಹೇಳುತ್ತವೆ. ಹಾಗೆಯೇ ಟಿಪೂ ಈ ದೇವಸ್ಥಾನಕ್ಕೆ 1785ರಲ್ಲಿ ಹನ್ನೆರಡು ಆನೆಗಳನ್ನೂ ಮತ್ತು 1786ರಲ್ಲಿ ಒಂದು ನಗಾರಿಯನ್ನೂ ಕೊಟ್ಟನು, ತಳದಲ್ಲಿ ಐದು ವಿಧವಾದ ಅಮೂಲ್ಯವಾದ ಹರಳುಗಳನ್ನು ಕುಂದಣಿಸಿರುವ ರತ್ನದ ಬಟ್ಟಲು ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನದಲ್ಲಿದೆ. ಅದು 'ಟಿಪ್ಪು ಸುಲ್ತಾನ ಪಾದ್‌ಷಾ'ನ ಅರ್ಪಣೆ. ಶ್ರೀರಂಗಪಟ್ಟಣದ ರಂಗನಾಥ ದೇವಾಲಯದಲ್ಲಿರುವ ಏಳು ಬೆಳ್ಳಿಯ ಬಟ್ಟಲುಗಳು ಮತ್ತು ಒಂದು ಮಂಗಳಾರತಿಯ ತಟ್ಟೆಯ ಮೇಲೆ ಕೆತ್ತಿರುವ ಬರಹಗಳು, ಅವು "ಟಿಪ್ಪುಸುಲ್ತಾನ ಪಾಚ್ಛಹನ ಕೊಡುಗೆಗಳೆಂದು ಸಾರುತ್ತಿವೆ. ನಂಜನಗೂಡಿನ ನಂಜುಂಡೇಶ್ವರ ದೇವಸ್ಥಾನದಲ್ಲಿ ಪಚ್ಚೆಯ ಪ್ರಶಸ್ತವಾದ ಕಲ್ಲಿನ ಲಿಂಗವನ್ನು ಪಾಚ್ಛಾ ಅಥವಾ ಪಾದ್‌ಷಾ ಲಿಂಗವೆಂದು ಕರೆಯಲಾಗಿದೆ. ಅದನ್ನು ಟಿಪೂವಿನ ಅಪ್ಪಣೆಯಂತೆ ಸ್ಥಾಪಿಸಿರುವುದಾಗಿ ಹೇಳಲಾಗಿದೆ.

ಟಿಪ್ಪು ಹಿಂದೂಗಳಿಗೆ ಸಂಪೂರ್ಣವಾದ ಪೂಜಾಸ್ವಾತಂತ್ರ್ಯವನ್ನಿತ್ತಿದ್ದನು. ಶ್ರೀರಂಗಪಟ್ಟಣದ ಕೋಟೆಯೊಳಗಣ ಭವ್ಯವಾದ ಶ್ರೀರಂಗನಾಥ ದೇವಾಲಯವು ಸುಲ್ತಾನನರಮನೆಯ ಪಶ್ಚಿಮಕ್ಕೆ ಕೆಲವೇ ಗಜಗಳ ದೂರದಲ್ಲಿದ್ದುದರಿಂದ, ದೇವಸ್ಥಾನದ ಘಂಟೆಗಳ ನಾದವನ್ನೂ ಮತ್ತು ಬ್ರಾಹ್ಮಣ ಅರ್ಚಕರ ಮಂತ್ರಗಳನ್ನು ಪ್ರತಿನಿತ್ಯವೂ ಕೇಳುತ್ತಿದ್ದನು. ಆದಾಗ್ಯೂ, ಅವನಾವುದಕ್ಕೂ ಅಡ್ಡಿಪಡಿಸಲಿಲ್ಲ. ಕೋಟೆಯೊಳಗಡೆ ಅರಮನೆಯ ಬಳಿ ಇದ್ದ ಮತ್ತೆರಡು ದೇವಸ್ಥಾನಗಳೆಂದರೆ ನರಸಿಂಹ ಮತ್ತು

ಗಂಗಾಧರೇಶ್ವರನದು. ಇವುಗಳಲ್ಲಿಯಾಗಲಿ ಅಥವಾ ರಾಜ್ಯದಾದ್ಯಂತ ಹರಡಿರುವ ಸಹಸ್ರಾರು ದೇವಸ್ಥಾನಗಳಾವುದರಲ್ಲಿಯೇ ಆಗಲಿ, ಹಿಂದೂಗಳು ಪೂಜೆಗೊಂಬುದನ್ನು ತಪ್ಪಿಸಲಿಲ್ಲ. ಅದಕ್ಕೆ ಪ್ರತಿಯಾಗಿ ಅನೇಕ ಸಂದರ್ಭಗಳಲ್ಲಿ, ಅವನು ಬ್ರಾಹ್ಮಣರಿಗೆ ತಮ್ಮ ಧಾರ್ಮಿಕ ಉತ್ಸವಾಚರಣೆಗಳಿಗಾಗಿ ಹಣವನ್ನು ಕೊಟ್ಟಿದ್ದಾನೆ. ಸಹಸ್ರ ಚಂಡಿ ಜಪದ ಆಚರಣೆಗಾಗಿ ಶೃಂಗೇರಿ ಮಠದ ಸ್ವಾಮಿಗಳಿಗೆ ಅಗತ್ಯವಾದ ಎಲ್ಲ ವಸ್ತುಗಳನ್ನೂ ಒದಗಿಸಬೇಕೆಂದು ಅಧಿಕಾರಿಗಳಿಗೆ ಅಪ್ಪಣೆ ಮಾಡಿದುದನ್ನು ನಾವು ಕಂಡಿದ್ದೇವೆ. ಅವ ರೀತಿಯಾಗಿ ಅವನು ರಾಯಕೋಟೆಯ ಎರಡು ದೇವಸ್ಥಾನಗಳಿಗೆ ಉಂಬಳಿಯನ್ನು ಕೊಟ್ಟನು. ಅವನಿಂದ ಸನ್ನದುಗಳನ್ನು ಪಡೆದಿದ್ದ ಅರ್ಚಕರವರು ಅವುಗಳನ್ನು 1793ರಲ್ಲಿ ಮನೋವಿನ ಮುಂದೆ ಇಟ್ಟು, ಉಂಬಳಿಗಳವುಗಳನ್ನು ಮುಂದುವರಿಸಿಕೊಡಬೇಕೆಂದೂ ಇಲ್ಲವಾದರೆ, ಧರ್ಮಕಾರ್ಯಾಚರಣೆಗೆ ಅಡ್ಡಿಯಾಗುವುದೆಂದೂ ಹೇಳಿದರು. ಹಿಂದೂ ಮತ್ತು ಮುಸ್ಲಿಮರಿಬ್ಬರಿಗೂ ಅವರವರ ಧಾರ್ಮಿಕ ಪರ್ವಗಳ ಸಂದರ್ಭಗಳಲ್ಲಿ ಹಣವನ್ನು ಹಂಚುತ್ತಿದ್ದನು. ಒಂದು ಸನ್ನದಿನ ಪ್ರಕಾರವಾಗಿ, ವೆಂಕಟಾಚಲಪತಿ ದೇವಸ್ಥಾನದಲ್ಲಿ ಪೂಜೆಯನ್ನು ಮುಂದುವರಿಸಲು ಮತ್ತು ಕಡಪ ಜಿಲ್ಲೆಯ ಪುಲ್ಲಿವೆಂಡದ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ನಿಂತುಹೋಗಿದ್ದ ಪೂಜೆಯನ್ನು ಮತ್ತೆ ಎತ್ತಿಕೊಳ್ಳಬೇಕೆಂದೂ ಟಿಪೂ ಆಜ್ಞಾಪಿಸಿದನು. ಒಂದು ಸಂದರ್ಭದಲ್ಲಿ ದೇವಸ್ಥಾನವನ್ನೇ ಕಟ್ಟಲಪ್ಪಣೆಯನ್ನು ಕೂಡ ಕೊಟ್ಟಿದ್ದಾನೆ. ಹೈದರನು ಕರ್ನಾಟಕವನ್ನು 1780ರಲ್ಲಿ ಮುತ್ತಿದಾಗ ಕಾಂಚೀಪುರದ ದೇವಸ್ಥಾನವೊಂದರ ಗೋಪುರಕ್ಕೆ ಅಸ್ತಿಭಾರವನ್ನು ಹಾಕಿದ್ದನಾದರೂ, ಅದನ್ನವನು ಮುಗಿಸಲಾಗಿರಲಿಲ್ಲ. ಮೂರನೆಯ ಆಂಗ್ಲೋ–ಮೈಸೂರು ಕದನದ ಸಂದರ್ಭದಲ್ಲಿ ಟಿಪ್ಪು ಅಲ್ಲಿಗೆ ಹೋಗಿದ್ದಾಗ, ಆ ದೇವಸ್ಥಾನದ ಕಟ್ಟಡಕ್ಕಾಗಿ 10,000 ಹೊನ್ನು ಕೊಟ್ಟನು. ಅವನು ಅಲ್ಲಿದ್ದ ಸಂದರ್ಭದಲ್ಲಿ ರಥೋತ್ಸವದಲ್ಲಿ ಭಾಗವಹಿಸಿ, ಆ ಸಂದರ್ಭದ ಬಾಣಬಿರುಸುಗಳ ವೆಚ್ಚವನ್ನು ತಾನೇ ವಹಿಸಿಕೊಂಡನು.

ಮೈಸೂರಿನ ಪರಕಾಲಮಠದಲ್ಲಿರುವ ಒಂದು ಸನ್ನದಿನ ಪ್ರಕಾರ, ಮೇಲುಕೋಟೆ ದೇವಸ್ಥಾನದಲ್ಲಿ ಪ್ರಾರ್ಥನಾಮಂತ್ರದ ಪಠಣದ ವಿಷಯವಾಗಿ ಎರಡು ಹಿಂದೂ ಪಂಗಡಗಳಲ್ಲಿ ಕಚ್ಚಾಟವಾದಾಗ, ಟಿಪೂ ಮಧ್ಯಸ್ಥಿಕೆಗಾರನಾಗಿದ್ದುದಾಗಿ ಕಾಣುತ್ತದೆ. ಆ ಸನ್ನದನ್ನು ಟಿಪ್ಪು ಕೊಟ್ಟಿದ್ದಾನೆ. ಅದು ಕನ್ನಡದಲ್ಲಿದೆ, ಅದರ ಮೇಲೆ ಪರ್ಷಿಯಾ ಅಕ್ಷರಗಳಲ್ಲಿ ಟಿಪೂವಿನ ಹೆಸರಿನ ಮುದ್ರೆಯಿದ್ದು, ರಾಜ್ಯದ ದೇವಸ್ಥಾನಗಳ ಇಲಾಖೆಯ ಪಾರುಪತ್ಯಗಾರನಿಗೆ ಸಂಬೋಧಿಸಲಾಗಿದೆ. ಟಿಪ್ಪುವಿನ ಕೈಕೆಳಗಿನ ಅಧಿಕಾರಿ ಅಂಚೆ ಶಾಮಯ್ಯನು ಮೇಲುಕೋಟೆಯ ದೇವಸ್ಥಾನದಲ್ಲಿ ಮಂತ್ರ ಪಠನದಲ್ಲಿ ನಡೆದು ಬಂದಿದ್ದ ಪದ್ಧತಿಯನ್ನು ತಪ್ಪಿಸಲು ಪ್ರಯತ್ನಿಸಿದ್ದರಿಂದ ಎರಡೂ ರೀತಿಯ ಮಂತ್ರಗಳನ್ನು ಸ್ಮರಿಸಬೇಕೆಂದು ಅದರಲ್ಲಿ ಅವನು ಅಪ್ಪಣೆ ಮಾಡಿದನು. ಆಮೇಲೆ ಮಂತ್ರ ಪಠನ ಮಾಡುತ್ತಿದ್ದ ಬಡಗ ಮತ್ತು ತೆಂಕ ಪಂಗಡಗಳೆರಡಕ್ಕೂ ನ್ಯಾಯವಾಗುವಂತೆ ನಡೆದುಕೊಳ್ಳಬೇಕೆಂದೂ, ತೆಂಕಲೈ ಪಂಗಡದ ಸ್ವಾಮಿಗಳ ವಿಗ್ರಹವನ್ನು

ಮೇಲುಕೋಟೆಯಲ್ಲಿ ಅದರ ಹಿಂದಣ ಜಾಗದಲ್ಲಿ ಮತ್ತೆ ಪ್ರತಿಷ್ಠಿಸಬೇಕೆಂದೂ, ದೇವಸ್ಥಾನದ ಪಾರುಪತ್ಯೇಗಾರನಿಗೆ ಅಣತಿಗೊಟ್ಟನು.

ಟಿಪ್ಪುವಿನ ಕಾಲದಲ್ಲಿ ಆದ ಪ್ರಮುಖ ಘಟನೆಗಳಲ್ಲಿ ಕೊಡಗು ಮತ್ತು ಕ್ರೈಸ್ತರನ್ನು ಶಿಕ್ಷೆಗೆ ಒಳಪಡಿಸಿದ ಘಟನೆಯು ಪ್ರಾಸ್ತುತ ಕಾಲದಲ್ಲಿಯೂ ಪರ ಮತ್ತು ವಿರೋಧ ನಿಲುವುಗಳನ್ನು ಪ್ರತಿನಿಧಿಸುತ್ತದೆ. ಇದಕ್ಕೆ ನಿಜವಾದ ವಿವರಣೆಯಂದರೆ ಅದು ಧಾರ್ಮಿಕ ಕಾರಣದಿಂದ ಆದದ್ದಲ್ಲ : ರಾಜಕೀಯವಾದದ್ದು. ಮಹಮ್ಮದೀಯೇತರ ಪ್ರಜೆಗಳು ಆಗಾಗ ದಂಗೆಯೆದ್ದು ತಪ್ಪಿತಸ್ಥರಾಗಿದ್ದುದರಿಂದ, ಈ ಮತ ಪರಿವರ್ತನೆಯುವದು ವಿಧವಾದ ಶಿಕ್ಷೆಯಂದು ಟಿಪ್ಪುಸುಲ್ತಾನ್ ಭಾವಿಸಿದ್ದನು. ಟಿಪ್ಪುಸುಲ್ತಾನ ತನ್ನ ಅಧಿಕಾರಿಗಳಿಗೆ ಕೊಡಗು ಮತ್ತು ಮಲಬಾರಿನ ಜನರು ತಮ್ಮ ದಂಗೆಕೋರ ವ್ಯಕ್ತಿಯನ್ನು ಬಿಡದೆ ಇದ್ದರೆ ಅವರನ್ನು ಮತಾಂತರಗೊಳಿಸಬೇಕೆಂದು ಅಪ್ಪಣೆ ನೀಡಿದನು. ತನ್ನ ಅಧಿಕಾರಿಗೆ ಬರೆದ ಒಂದು ಕಾಗದದಲ್ಲಿ ನಾಯರ್‌ಗಳನ್ನು ಇಸ್ಲಾಮ್ ಮತಕ್ಕೆ ಅವರೆದ್ದ ದಂಗೆಗೆ ಶಿಕ್ಷೆಯಾಗಿ ಪರಿವರ್ತನೆಗೊಳಿಸಿದೆನೆಂದು ಒಪ್ಪಿಕೊಡಿದ್ದಾನೆ. ಅವರು 6 ಬಾರಿ ದಂಗೆಯೆದ್ದರು, ನಾನು ಅವರನ್ನು 6 ಬಾರಿಯೂ ಮನ್ನಿಸಿದೆ. ಈ ವಿಧವಾದ ಭಯದಿಂದ ಮತ್ತು ಉದಾಹರಣೆಗಳಿಂದ ಅವನ್ನು ಕೊಡವರನ್ನು ಮತ್ತು ನಾಯರ್‌ಗಳನ್ನು ವಿಧೇಯರನ್ನಾಗಿ ಮಾಡಲು ಮತಾಂತರ ಎಂಬುದನ್ನು ರಾಜಕೀಯ ಯುಕ್ತಿಯನ್ನಾಗಿ ಬಳಸಿದ್ದಾನೆ.

2ನೇ ಆಂಗ್ಲೋ–ಮೈಸೂರು ಕದನದ ಸಂದರ್ಭದಲ್ಲಿ ಮೈಸೂರಿನ ಪ್ರಜೆಗಳಾಗಿದ್ದ ಕನ್ನಡದ ಕ್ರೈಸ್ತರು ಬ್ರಿಟಿಷರಿಗೆ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿದರು. ಮ್ಯಾಥ್ಯೂಸ್ ಪಡೆವಣ ಕೆರೆಯನ್ನು ಮುತ್ತಿದಾಗ ಕನ್ನಡದ ಕ್ರೈಸ್ತರು ಗೂಢಚಾರರಾಗಿ ಕೆಲಸ ನಿರ್ವಹಿಸಿ ಮ್ಯಾಥ್ಯೂಸ್ ಮಂಗಳೂರು ಮತ್ತು ಬಿದನೂರು ಪ್ರಾಂತ್ಯಗಳನ್ನು ಗೆಲ್ಲಲು ಸಹಾಯವಾದರು. ಈ ಕಾರಣಕ್ಕಾಗಿ ಟಿಪ್ಪು ಕ್ರೈಸ್ತರನ್ನು ಶಿಕ್ಷಿಸಿದನು. ಟಿಪ್ಪುವನ್ನು ಸೋಲಿಸಲು ಇಂಗ್ಲಿಷರೊಡನೆ ಕನ್ನಡದ ಕ್ರೈಸ್ತರು ಕಾಲಿ ಮತ್ತು ಮಹಮ್ಮದಾಲಿ ಕೂಡಿಕೊಂಡರು. ಫಾದರ್ ಜೋಕಿಮಾನನ್ನು ಕೋಟೆಯೊಂದರಲ್ಲಿ ಬಂಧಿಸಿ, ಮೌಂಟ್ ಮೇರಿಯನ್ನ ಎಲ್ಲಾ ಕ್ರೈಸ್ತ ನೆಲೆಗಳನ್ನು ಕೊಚ್ಚಿಗೆ ಗಡಿಪಾರು ಮಾಡಿದನು. ಕೆಲವರನ್ನು ಅರಮನೆಯಲ್ಲಿಯೂ ಮತ್ತು ಸೇನೆಯಲ್ಲಿಯೂ ದೊಡ್ಡ ಹುದ್ದೆಗಳನ್ನೇ ಟಿಪ್ಪುಸುಲ್ತಾನನು ನಿಡಿದನು. ಬಹುಸಂಖ್ಯೆಯ ಕ್ರೈಸ್ತರನ್ನು ಶ್ರೀರಂಗಪಟ್ಟಣ ಮತ್ತು ಚಿತ್ರದುರ್ಗದ ಸೆರೆಮನೆಯಲ್ಲಿ ಇರಿಸಿ, ತಮ್ಮ ಜಾತಿಯನ್ನು ಉಳಿಸಿಕೊಳ್ಳಲು ಅನುಮತಿಯನ್ನು ನೀಡಿದನು. ಕ್ರಿ.ಶ.1789ರಲ್ಲಿ ಟಿಪ್ಪುಸುಲ್ತಾನನು ಗೋವಾದ ಆರ್ಚ್ ಬಿಷಪ್ಪ ಬಳಿ ಬಂದು ನಿಯೋಗವನ್ನು ಕಳುಹಿಸಿ ಸೆರೆಮನೆಯಲ್ಲಿರುವ ಕಾರಣದಿಂದಾಗಿ, ಕೆಲವು ಕ್ರೈಸ್ತರು ತಮ್ಮ ಧಾರ್ಮಿಕ ಕರ್ತವ್ಯಗಳನ್ನು ಕಡೆಗಡೆಸಿರುವುದರಿಂದ ಅವರಿಗಾಗಿ ಕೇವಲ ಪುರೋಹಿತವರ್ಗದವರನ್ನು ಕಳಿಸಬೇಕೆಂದು ಟಿಪ್ಪುಸುಲ್ತಾನ್

ಮನವಿ ಮಾಡಿಕೊಂಡಿದ್ದಾನೆ. ಸಿರಿಯನ್ ಕ್ರೈಸ್ತರನ್ನು ಟಿಪ್ಪು ಚೆನ್ನಾಗಿ ನಡೆಸಿಕೊಂಡನು. ಆರ್ಮೇನಿಯಾದ ಕ್ರೈಸ್ತವರ್ತಕರಿಗೆ ಮೈಸೂರಿನಲ್ಲಿ ನೆಲೆ ನಿಂತು ವ್ಯಾಪಾರ ನಡೆಸುವಂತೆ ಎಲ್ಲಾ ಸೌಲಭ್ಯಗಳನ್ನು ಟಿಪ್ಪುಸುಲ್ತಾನನು ಒದಗಿಸಿದನು.

ಮಲಬಾರಿನಲ್ಲಿಯೂ ಕೂಡ ಟಿಪ್ಪೂ ಬ್ರಾಹ್ಮಣರಿಗೂ ಹಾಗೂ ದೇವಸ್ಥಾನಗಳಿಗೂ ದತ್ತಿಗಳನ್ನು ಕೊಟ್ಟೇ ಇದ್ದನೆಂಬುದು ಪ್ರಮುಖವಾದ ವಿಷಯವೇ ಹೌದು. 1789ರಲ್ಲಿ ಅವರು ತಿರುವಾಂಕೂರು ರಕ್ಷಣಾಸಾಲುಗಳತ್ತ, ನಡೆದಾಗ ತಿರುಚೂರಿನ ಬಳಿ ಡಿಸೆಂಬರು 14ರಿಂದ 29ರ ವರೆಗೆ ಪಾಳೆಯವನ್ನು ಬಿಟ್ಟಿದ್ದು, ವಡಕ್ಕುನಾಥನ್ ದೇವಾಲಯದಿಂದ ತನ್ನ ಸೈನ್ಯಕ್ಕೆ ಬೇಕಾದ ಅಡಿಗೆಯ ಪಾತ್ರೆಗಳನ್ನು ಎರವಲು ತೆಗೆದುಕೊಂಡಿದ್ದನು. ತಿರುಚೂರನ್ನು ಬಿಡುವಾಗ, ಪಾತ್ರೆಗಳನ್ನು ದೇವಸ್ಥಾನಕ್ಕೆ ಹಿಂದಿರುಗಿಸಿದುದೊಂದೇ ಅಲ್ಲ, ಕಂಚಿನ ದೊಡ್ಡ ದೀಪ ಸ್ತಂಭವನ್ನು ಕೂಡ ಕೊಟ್ಟನು. ಹಾಗೆಯೇ ಅವನು ಮಲಬಾರಿನ ಇತರ ಪ್ರಾಂತಗಳ ದೇವಾಲಯಗಳಿಗೆ, ಮತ್ತು ಬ್ರಾಹ್ಮಣರಿಗೆ ನೆಲವನ್ನು ಉಂಬಳಿಯಾಗಿ ಕೊಟ್ಟನು. ಅಂತಹ ಉಂಬಳಿಗಳ ಪಟ್ಟಿ ಹೀಗಿದೆ.

**ದೇವದಾಯ ನೀಡಿದ ವಿವರ**

| ಸಂ | ದಾನ ಪಡೆದವರು | ಸ್ಥಳ | ಉದ್ದೇಶ | ಎಷ್ಟು ಎಕರೆ |
|---|---|---|---|---|
| 1. | ಕದರಂಕಕರು | ತಿರುವಂಬಾಡಿ ಆಮ್ಸೋಮ್ ಕಲ್ಲಿಕೋಟೆ ತಾ | ದೇವದಾಯಮ್ ದೇವಸ್ಥಾನದ ದೈನಂದಿನ ಪೂಜಾ ಕೈಕಂರ್ಯ | 2.69 ಎಕರೆ ಗದ್ದೆ |
| 2. | ತಮಣ್ಣೂರ್ ದೇವಸ್ವೋಮ್ | ಅದೇ | ಅದೇ | 1.48 ಎಕರೆ ಗದ್ದೆ |
| 3. | ಅಣಯಮ್ ಕುನ್ನತ್ ದೇವಸ್ವೋಮ್ | ಅದೇ | ಅದೇ | 1.57 ಎಕರೆ + 0.89 ಎಕರೆ ಗದ್ದೆ |
| 4. | ಕುಮಾರನಲ್ಲು ದೇವಸ್ವೋಮ್ | ಅದೇ | ಅದೇ | 1.36 ಎಕರೆ ಗದ್ದೆ |
| 5. | ಪುತಿಯಪಾಡಿ ದೇವಸ್ವೋಮ್ | ಏರ್ನಾಡ್ ತಾ॥ ನೀಲಂಬೂರ್ | ಧಾರ್ಮಿಕ ಸಂಸ್ಥೆ, ಮಸೀದಿ ನಿರ್ವಹಣೆಗಾಗಿ | 1.91 ಎಕರೆ ಗದ್ದೆ |
| 6. | ಕೈಪಿಲ್ ಕರಿಂಗಾಳಿ ದೇವಸ್ಥಾನ | ಅದೇ | ದೇವದಾಯ ದೈನಂದಿನ ಪೂಜಾ ಕಾರ್ಯಕ್ಕಾಇ | 1.37 ಎಕರೆ ಗದ್ದೆ |

| | | | | |
|---|---|---|---|---|
| 7. | ಚೇಮೆಂತಲ ಭಗವತಿ ದೇವಸ್ಥಾನ | ಅದೇ | ಅದೇ | 15.07 ಎಕರೆ ಗದ್ದೆ |
| 8. | ವಂಡೂರ್ ಶಿವ ದೇವಸ್ಥಾನ | ವಂಡೂರ್ ಆಮ್ಸೋಮ್ | ಅದೇ | 6.16 ಎಕರೆ ಗದ್ದೆ |
| 9. | ಮನ್ನತಲಿ ದೇವಸ್ಥಾನ | ಅದೇ | ಅದೇ | 3.02 ಎಕರೆ ಗದ್ದೆ |
| 10. | ಚಾತೇನ್‌ಗುಳಂಗರ ಶಿವ ದೇವಸ್ಥಾನ | ಅದೇ | ಅದೇ | 15.40 ಎಕರೆ ಗದ್ದೆ |
| 11. | ಪೊಟ್ಟಿಯತ್ತು ಶಿವ ದೇವಸ್ಥಾನ | ಕಿಲ್ಮರಿ ಅಮ್ಸೋಮ್ | ಅದೇ | 1.89 ಎಕರೆ ಗದ್ದೆ |
| 12. | ನಡುವತ್ ದೇವಸ್ಥಾನ | ಪಣಿಕ್ಕಾಡ್ | ಅದೇ | 3.77 ಎಕರೆ ಗದ್ದೆ |
| 13. | ಕುರುಮಗೋಟ್ | ಅದೇ | ದೇವದಾಯಮ್ ದೈನಂದಿನ ಪೂಜಾ ಕೈಕಂರ್ಯ | 98 ಎಕರೆ ಗದ್ದೆ |
| 14. | ನೆಚ್ಚಿಪೆರಂಬತ್ ತ್ರಿಪುರಾಂದಕನ್ ದೇವಸ್ಥಾನ | ಕಿಲ್ಮುರಿ | ಅದೇ | 7.29 ಎಕರೆ ಗದ್ದೆ |
| 15. | ಉಲಾಮನ್ ದೇವಸ್ಥಾನ | ನೆಡುವ ಆಮ್ಸೋಮ್ | ಅದೇ | 12.73 ಎಕರೆ ಗದ್ದೆ |
| 16. | ಚೇರಾಮಂಗಲಮ್ | ಅದೇ | ಅದೇ | 2.60 ಎಕರೆ ಗದ್ದೆ |
| 17. | ನೇರುಕೈದಕೊಟ್ಟ ದೇವಸ್ಥಾನ | ಕಡುತ್ತದಪಾಳಿ ಪಾಲಘಾಟ್ | ಅದೇ | 2.75 ಎಕರೆ ಗದ್ದೆ |
| 18. | ತ್ರಿಕ್ಕೋಮ್ ದೇವಸ್ಥಾನ ಕಲ್ಲಿಕೋಟೆ ತಾ. | ಕಸಬಾ ಆಮ್ಸೋಮ್ | ಅದೇ | 2.12 ಎಕರೆ ಗದ್ದೆ |
| 19. | ತಿರುಮಂತನನ್ನು ಭಗವತಿ ದೇವಸ್ಥಾನ | ನೀಲಾಂಬೂರು ಆಮ್ಸೋಮ್ | ಅದೇ | 2.12 ಎಕರೆ ಗದ್ದೆ |
| 20. | ಮೇಲೇಡೆತ್ ದೇವಸ್ಥಾನ | ಕಸಬಾ ಆಮ್ಸೋಮ್ ಕಲ್ಲಿಕೋಟೆ ತಾ॥ | ಅದೇ | 6.62 ಎಕರೆ ಗದ್ದೆ |
| 21. | ಪಾಲಪರಂಬತ್ ದೇವಸ್ಥಾನ | ಕುಡುವಾಯ್ತು ಆಮೋಮಸ್ ಏರ್ನಾಡ್ ತಾ॥ | ಅದೇ | 23 ಎಕರೆ ಗದ್ದೆ |
| 22. | ಕೊಂಡೊತ್ತಿಲ್ ತಂಗಲ್ | ಕುಲಂತ್ತೂರ್ ಆಮ್ಸೋಮ್ | ವೈಯಕ್ತಿಕ | 135.9 ಎಕರೆ ಗದ್ದೆ 267.09ಎಕರೆಗದ್ದೆ |
| 23. | ಮೂತ್ತಕುನ್ನತ್ ದುರ್ಗಾ ಭಗವತಿ ದಏವಸ್ಥಾನ | ಮಂಚೇರಿ ಆಮ್ಸೋಮ್ | ದೇವದಾಯಮ್ ಪೂಜಾ ಕೈಕಂರ್ಯ | 45.25 ಎಕರೆ ಗದ್ದೆ |

| | | | | |
|---|---|---|---|---|
| 24. | ಅಭಿರಾಯ ಶಿವ ದೇವಸ್ಥಾನ | ಅದೇ | ಅದೇ | 2.25 ಎಕರೆ ಗದ್ದೆ |
| 25. | ಪಂದಲ್ಲೂರ್ ಭಗವತಿ ದೇವಸ್ಥಾನ | ಕಸಬಾ ಆಮ್ಸೋಮ್ ಕಲ್ಲಿಕೋಟೆ ತಾ|| | ಅದೇ | 7.20 ಎಕರೆ ಗದ್ದೆ |
| 26. | ವೇಗತ್ತಡಿ ಕರಿಂಗಾಳಿ ದೇವಸ್ಥಾನ | ಮಂಜೇರಿ ಆಮ್ಸೋಮ್ | ಅದೇ | 425 ಎಕರೆ ಗದ್ದೆ |
| 27. | ತಿರುವಿಡ್ಡೈ ದೇವಸ್ಥಾನ | ಅದೇ | ಅದೇ | 110 ಎಕರೆ ಗದ್ದೆ |
| 28. | ಒರಿನೇಡತ್ ಶಿವ ದೇವಸ್ಥಾನ | ಅದೇ | ಅದೇ | 210 ಎಕರೆ ಗದ್ದೆ |
| 29. | ಕ್ವೈಲಾಂಡಿ ಮಸೀದಿ | ವೈಯ್ಯೂರ್ ಆಮ್ಸೋಮ್ | ಧಾರ್ಮಿಕ ಸಂಸ್ಥೆ ಧಾರ್ಮಿಕ ಕಾರ್ಯ ಮತ್ತು ನಿರ್ವಹಣೆ | 197 ಎಕರೆ ಗದ್ದೆ 56 ಎಕರೆ ಗದ್ದೆ 235 ಎಕರೆ ಗದ್ದೆ |
| 30. | ಮಣ್ಣೂರ್ ಶಿವ ದೇವಸ್ಥಾನ | ವಳ್ಳಿಕುಣ್ಣು ಆಮ್ಸೋಮ್ ಏಡ್ನಾಡ್ ತಾ|| | ದೇವದಾಯಂ ದೈನಂದಿನ ಪೂಜಾ ಕೈಕಂರ್ಯ | 70.42 ಎಕರೆ ಗದ್ದೆ 3.29 ಎಕರೆ ಗದ್ದೆ 73.71 ಎಕರೆ ಗದ್ದೆ |
| 31. | ನರಕ್ಕೈಯಿತ ಕೋಟ್ವಯಿರ್ ದೇವಸ್ಥಾನ | ಅದೇ | ಅದೇ | 53.13 ಎಕರೆ ಗದ್ದೆ 13 ಎಕರೆ ತೋಟ 12.4 ಎಕರೆ ಖುಷ್ಕಿ |
| 32. | ಕುನ್ನಿಕುಲಂಗಾರ ದೇವಸ್ಥಾನ | ಕಸಬಾ ಆಮ್ಸೋಮ್ ಕಲ್ಲಿಕೋಟೆ ತಾ|| | ಅದೇ | 3.25 ಎಕರೆ ಗದ್ದೆ |
| 33. | ತಿರುನಾವಾಯ ವಿಷ್ಣು ದೇವಸ್ಥಾನ | ಅದೇ | ಅದೇ | 188 ಎಕರೆ ಗದ್ದೆ 16.31 ಎಕರೆ ಗದ್ದೆ |
| 34. | ತ್ರಿಕಂಡಿಯಾರ್ ಸಮೂಹಮ್ ಛತ್ರಂ | ತ್ರಿಕಂಡಿಯೂರ್ ಆಮ್ಸೋಮ್ ಪೊನ್ನಾನಿ ತಾ|| | ಬ್ರಾಹ್ಮಣರು ಮತ್ತು ಯತಿಗಳಿಗೆ ಅನ್ನದಾನ | 48.03 ಎಕರೆ ಗದ್ದೆ 14.40 ಎಕರೆ ತೋಟ |
| 35. | ತ್ರಿಕಂಡಿಯುರ್ ಶಿವ | ಅದೇ ದೇವಸ್ಥಾನ | ದೇವದಾಯಮ್ ಧಾರ್ಮಿಕ ಕೈಕಂರ್ಯ | 366.34 ಎಕರೆ ಗದ್ದೆ |
| 36. | ತ್ರಿಪಂಗೋಡ್ ಶಿವ | ತ್ರಿಪಂಗೋಡ್ ದೇವಸ್ಥಾನ | ಅದೇ ಆಮ್ಸೋಮ್ | 274.85ಎಕರೆ ಗದ್ದೆ 65.07 ಎಕರೆ ಗದ್ದೆ 50 ಎಕರೆ ಗದ್ದೆ |
| 37. | ನಡುವೈಲ್ ಮಡತ್ತಿಲ್ ತ್ರುಮಂಬು | ತ್ರಿಷೂರ್, ಕೊಚ್ಚಿನ್ | ಅದೇ | 40.26ಎಕರೆ ಗದ್ದೆ 23.13 ಎಕರೆ ಗದ್ದೆ |

| | | | | |
|---|---|---|---|---|
| | | | | 4.17ಎಕರೆ ಗದ್ದೆ |
| 38. | ತ್ರಿಕ್ಕೈಕಾಡ್ ಮಲಪ್ಪುರಮ್ ಶ್ರೀ ರಾಮಸ್ವಾಮಿ ದೇವಸ್ಥಾನ | ಪರಿಯಂಪುರಮ್ ಆಮ್ಸೋಮ್ ಪೊನ್ನಾಣಿ ತಾ॥ | ಅದೇ | 1.98 ಎ. ತೋಟ |
| 39. | ತ್ರಿಪನ್‌ಗೋಟ್ ಸಮುಹಮ್ | ಪಲ್ಲಿಪುರಮ್ ಆಮ್ಸೋಮ್ ಪೊನ್ನಾನಿ ತಾ॥ | ಧರ್ಮಧಾಯಮ್ ಬ್ರಾಹ್ಮಣರು, ಯತಿಗಳೀಗೆ ಅನ್ನದಾನ | 6.31 ಎಕರೆ ಗದ್ದೆ |
| 40. | ಪೊನ್ನಾಣಿ ಜರಮ್ ಮಸೀದಿ | ಪೊನ್ನಾನಿ ನಗರಂ ಆಮ್ಸೋಮ್ ಪೊನ್ನಾನಿ | ಧಾರ್ಮಿಕ ಸಂಸ್ಥೆ ಕರಮ್‌ನ ನಿರ್ವಹಣೆ | 2.90 ಎಕರೆ ಗದ್ದೆ |
| 41. | ತ್ರಿಪಂಗೋಡ್ ಸಮೂಹಮ್ | ಪಲ್ಲಿಪುರಮ್ ಚನ್‌ವಟ್ಟೋಮ್‌ವರಮ್ ಪೊನ್ನಾನಿ ತಾ॥ | ದೇವದಾಯಮ್ ಧಾರ್ಮಿಕ ಉತ್ಸವ ಆಚರಣೆ | 24.26 ಎಕರೆ ಗದ್ದೆ |
| 42. | ವೆಟ್ಟತ್ತೂರ್ ಕಾಳಿಭಗವತಿ ದೇವಸ್ಥಾನ | ಕಸಬಾ ಆಮ್ಸೋಮ್ ಕಲ್ಲಿಕೋಟೆ ತಾ॥ | ದೇವದಾಯಮ್ ಧಾರ್ಮಿಕ ಕೈಂಕರ್ಯ ಆಚರಣೆ | 52.31 ಎಕರೆ ಗದ್ದೆ 6.12 ಎ ತೋಟ |
| 43. | ತೊರಕ್ಕುವಿಲ್ ದೇವಸ್ಥಾನ | ಅದೇ | ಅದೇ | 4.71 ಎಕರೆ ಗದ್ದೆ |
| 44. | ಕೇರಳಾಧೀಶ್ವರಪುರಂ ದೇವಸ್ಥಾನ | ಅದೇ | ಅದೇ | 35.72 ಎಕರೆ ಗದ್ದೆ 576.09 ಎ. ಗದ್ದೆ 200.62 ಎ. ಗದ್ದೆ |
| 45. | ತ್ರಿಕಂಡಿಯೂರ್ ವೆಟ್ಟಕೊರುಮಗನ್‌ಕಾರ ದೇವಸ್ಥಾನ | ಅದೇ | ಅದೇ | 278.19 ಎ. ಗದ್ದೆ 147.67 ಎ. ಗದ್ದೆ 35.02 ಎ. ಗದ್ದೆ |
| 46. | ಪೆರುಮವ ವಿಷ್ಣು ದೇವಸ್ಥಾನ ಪೊನ್ನಾಣಿ ತಾ॥ | ವೆಟ್ಟೋಮ್ ಆಮ್ಸೋಮ್ | ಅದೇ | 1.94 ಎ. ಗದ್ದೆ |
| 47. | ಪೆಟಿಂಟ್ರಕೋವಿಲ್ | ಕಸಬಾ ಆಮ್ಸೋಮ್ ಕಲ್ಲಿಕೋಟೆ ತಾ॥ | ಅದೇ | 60.49 ಎ. ಗದ್ದೆ |
| 48. | ದರ್ಗಾ ಮಸೀದಿ | ರಾಯರಿ ಮಂಗಲಮ್ ಆಮ್ಸೋಮ್ ಪೊನ್ನಾನಿ ತಾ॥ | ಧಾರ್ಮಿಕ ಸಂಸ್ಥೆ ಮಸೀದಿಯ ನಿರ್ವಹಣೆ | 11.45 ಎ. ಗದ್ದೆ |

| | | | | |
|---|---|---|---|---|
| 49. | ಕುಂಬಿಕುಲಾಂಕರ ಶಿವ ದೇವಸ್ಥಾನ | ಕಸಬಾ ಆಮ್ಸೋಮ್ ಕಲ್ಲಿಕೋಟೆ ತಾ|| | ದೇವರಾಯಮ್ ಧಾರ್ಮಿಕ ಕೈಕಂರ್ಯಗಳ ಆಚರಣೆ | 11.29 ಎ. ಗದ್ದೆ 16.87 ಎ. ತೋಟ |
| 50. | ಚೆಂಬಲಮ್‌ಗೋಡ್ ಸಮೂಹಮ್ ಛತ್ರಂ | ಪರತ್ತೂರ್ ಆಮ್ಸೋಮ್ ಪೊನ್ನಾನಿ ತಾ|| | ಧರ್ಮದಾಯಮ್ ಬ್ರಾಗ್ಮಣರಿಗೆ ಅನ್ನದಾನ; ವಿದ್ಯಾರ್ಥಿಗಳಿಗೆ ಧಾರ್ಮಿಕ ಶಿಕ್ಷಣ | 11.29 ಎ. ಗದ್ದೆ 7.43 ಎ. ತೋಟ |
| 51. | ಪುಳ್ಳಿನಿ ಶಿವ ದೇವಸ್ಥಾನ | ಮಂಗಳಮ್ ಆಮ್ಸೋಮ್ ಕೊಚ್ಚಿನ್ | ದೇವದಾಯಮ್ ಧಾರ್ಮಿಕ ಪೂಜಾ ಕೈಕಂರ್ಯಗಳು | 2.71 ಎ. ಗದ್ದೆ |
| 52. | ಪರೀಂದ್ರಕೋವಿಲ್ ಶಿವ ದೇವಸ್ಥಾನ | ಕಸಬಾ ಆಮ್ಸೋಮ್ ಕಲ್ಲಿಕೋಟೆ ತಾ|| | ಅದೇ | 1.98 ಎ. ಗದ್ದೆ 7.37 ಎ. ತೋಟ |
| 53. | ಕುಂಡೆಲೆತಿ ಭಗವತಿ ದೇವಸ್ಥಾನ | ಅದೇ | ಅದೇ | 32. ಎ. ಗದ್ದೆ |
| 54. | ಪರಮುಡಿಸ್ಸೆರಿ ನಡಿಂಗೋರಿ ಮಗನ್ ದೇವಸ್ಥಾನ | ವೈಲತ್ತೋರ್ ಆಮ್ಸೋಮ್ ಪೊನ್ನಾನಿ ತಾ|| | ಅದೇ | 21.50 ಎ. ಗದ್ದೆ |
| 55. | ಕೊಟ್ಟಪುರತ್ತೆ ವೇಟ್ಟೈಕ್ಕೋರುಮಗನ್ | ಸ್ಥಳದ ಖಚಿತತೆ ಇಲ್ಲ | ಅದೇ | 11.20 ಎ. ಗದ್ದೆ |
| 56. | ತಿರುವಂಚಿಕುಲಮ್ ಶಿವ ದೇವಸ್ಥಾನ | ತ್ರಿಷೂರ್, ಕೊಚ್ಚಿನ್ | ಅದೇ | 226.60 ಎ. ಗದ್ದೆ 90.10 ಎ. ತೋಟ |
| 57. | ತ್ರಪ್ರಯಾರ್ ದೇವಸ್ಥಾನ | ತ್ರಿಪ್ರಯಾರ್ ಆಮ್ಸೋಮ್ ಕೊಚ್ಚಿನ್ | ಅದೇ | 123 ಎ. ಗದ್ದೆ |
| 58. | ಗುರುವಾಯೂರ್ ದೇವಸ್ಥಾನ | ಗುರುವಾಯುರ್ ಆಮ್ಸೋಮ್ ಪೊನ್ನಾಣಿ ತಾ|| | ಅದೇ | 75.10 ಎ. ಗದ್ದೆ 593.90 ಎ. ಗದ್ದೆ |
| 59. | ಐಕೇರ್ ಬ್ರಹ್ಮ ರಾಕ್ಷಸ ದೇವಸ್ಥಾನ | ಎಡಕೈಯೂರ್ ಆಮ್ಸೋಮ್ ಚುಂಗತ್ ತಾ|| | ದೇವದಾಯಮ್ ಮತ್ತು ದರ್ಮದಾಯಮ್ ದೇವಸ್ಥಾನದಧಾರ್ಮಿಕ ಕೈಕಂರ್ಯಗಳು ಮತ್ತು ಬ್ರಾಹ್ಮಣರಿಗೆ ದಾನ ಇತ್ಯಾದಿ | 57.6 ಎ. ಗದ್ದೆ 76.1 ಎ. ತೋಟ |

Reference:

[1] The Records of the Sringeri Dharmasamsthana by Dr. A.K. Shastry P

[2] Mohibbul Hasan Khan, History of Tipu Sultan, Calcutta, 1951

[3] Anirudda Ray, Tipu Sultan and his age. The Asiatic Society, 2002.

[4] Sheik Ali, B., Tipu Sultan, A Study in Diplomacy and Confrontation, Mysore, 1982.

[5] Irfan Habib, Haider Ali and Tippu Sultan, New Delhi, New Delhi, 1999.

[6] Irfan Habib, State and diplomacy under Tipu Sultan Tulika, New Delhi, 2001.

[7] ಟೀಪೂ ಮಾನ್ಯತ ಸಿಗದ ಸುಲ್ತಾನ ಅಂದು:ಇಂದು: ಪಿ ವಿ ನಂಜರಾಜ್ ಅರಸು ಅಭಿರುಚಿ ಪ್ರಕಾಶನ

[8] ಕರ್ನಾಟಕ ಚರಿತ್ರೆ ಸಂಪುಟ 5 ಸಂಪುಟ ಮತ್ತು ಪ್ರದಾನ ಸಂಪಾದಕರು, ಬಿ ಶೇಕ್ ಅಲಿ ಕನ್ನಡ ವಿಶ್ವವಿದ್ಯಾಲಯ ಹಂಪಿ

[9] ಅಪ್ರತಿಮ ದೇಶ ಭಕ್ತ ಟೀಪೂ ಸುಲ್ತಾನ್ ಕೊ ಚನ್ನಬಸಪ್ಪ ನವ ಕರ್ನಾಟಕ ಪ್ರಕಾಶನ

[10] ಭಾರತಕ್ಕೆ ಟಿಪ್ಪು ಕೊಡುಗೆ ಏನು? ನಂದ ಕುಮಾರ, ಲಡಾಯಿ ಪ್ರಕಾಶನ